# ಬಲೆ ಮಾಡುವ ಬಗೆ



ಡಿಜಿಟಲ್ ವಿಕೇಂದ್ರೀಕರಣ ಎಂಬುದು ಇಂಗ್ಲೆಂಡಿನ "ಡಂಡಿ ವಿಶ್ವವಿದ್ಯಾಲಯ" ಮತ್ತು ಭಾರತದಲ್ಲಿರುವ "ಕ್ವಿಕ್ಸ್ಯಾಂಡ್" ಕಂಪನಿ ಜಂಟಿಯಾಗಿ ನಡೆಸಿದ್ದ ಯೋಜನೆ. ಅದರ ಭಾಗವಾಗಿ, ಈಚೆಗೆ ಹುಟ್ಟುತ್ತಿರುವ ಉಲಿ-ಅವಲಂಬಿತ ಅಂತರ್ಜಾಲ ಮತ್ತು ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳನ್ನು ಸ್ಥಳೀಯ ಜನರ ಒಳಿತಿಗಾಗಿ ಬಳಸುವುದರ ಬಗ್ಗೆ ಅವರ ಸಹಕಾರದೊಂದಿಗೇ ಹೊಸ ಕಥೆಗಳನ್ನು ಸೃಷ್ಟಿಸಿದೆವು.


ಹಾಲಿ ಕಥೆ 2030ರಲ್ಲಿ ನಡೆಯುವಂಥದ್ದು. ಈ ಹೊತ್ತಿಗೆ ವಿಕೇಂದ್ರೀಕೃತ ಬಲೆ ನೆಟ್ವರ್ಕುಗಳಿಂದ ಅಂತರ್ಜಾಲ ಮತ್ತು ಫೋನ್ ತೊಂದರೆಗಳು ಕಡಿಮೆಯಾಗಿವೆ. 2025ಇಸವಿಯಲ್ಲಿ ಒಂದು ಪುಟ್ಟ ಹಳ್ಳಿಯಲ್ಲಿ ಶುರುವಾದ ಪ್ರಯೋಗಗಳು ಹೇಗೆ ಇಡಿ ದಕ್ಷಿಣ ಭಾರತದಲ್ಲಿ ಹಬ್ಬಿ, ದೇಶಾದ್ಯಂತ ಚಳುವಳಿಯಾಗಿ, ಜನರಿಗೆ ಅವರ ಡೇಟಾ ಮೇಲೆ ಸಂಪೂರ್ಣ ನಿಯಂತ್ರಣ ಕೊಟ್ಟಿರುವ ಕಥೆಯಿದು.





ವಿನೋದ್ ಜೊತೆ ಮಾತಾಡಕಾಗ್ಲಿಲ್ಲ. ಎಲ್ಲಾ ಸರ್ವಿಸ್ಸಿಗೆ ತಡೆಹಾಕಿದಾರಂತೆ!
ಹೌದಾ? ಹಾಗ್ಮಾಡಿ ಒಂದು ತಿಂಗ್ಳು ಮೇಲಾಯ್ತು! ಆ ಹಳ್ಳಿ-ಹಳ್ಳಿ ಜಗಳ ಇತ್ಯರ್ಥ ಕೂಡ ಆಯ್ತು. ಏನಿದು ಹಾಗಾದ್ರೆ?
ಏನೋ ಮುಖ್ಯಮಂತ್ರಿ ಅವನಿಗೆ ಹೋದ್ ಚುನಾವಣೆಯಲ್ಲಿ ವೋಟ್ ಹಾಕ್ಲಿಲ್ಲಂತ ಈ ಜಿಲ್ಲೆಗೆ ಈ ರೀತಿ ಕೇಡ್ಮಾಡ್ತಿದಾನಂತ ಜನ ಮಾತಾಡ್ತಿದಾರೆ.
ನನ್ನಕ್ಕನ್ ಮನೆಯವ್ರು ಏನೋ ಲೋಕಲ್ ನೆಟ್ವರ್ಕ್ ಬಗ್ಗೆ ಹೇಳ್ತಿದ್ರು. ತಡಿ, ನಿಂಗ್ ಮೆಸೆಜ್ ತೋರಿಸ್ತೀನಿ...
ಬಲೆ ನೆಟ್ವರ್ಕ್
ನೆಟ್ವರ್ಕ್ ಸಮಸ್ಯೆಗಳಿಂದ ಸುಸ್ತಾಗಿದೆಯಾ?
ಪೂರ್ತಿ ವಿಕೇಂದ್ರೀಕೃತ ನೆಟ್ವರ್ಕ್
ನಿಮ್ಮ ಜನರ ಕೈಯಲ್ಲೇ ನೆಟ್ವರ್ಕಿನ ನಿಯಂತ್ರಣ
ಜಾಹೀರಾತು-ರಹಿತ
ಡೇಟಾ ಕಳ್ಳತನ ಅಸಾಧ್ಯ
ಸರ್ಕಾರದ ನಿಗಾ ಇಲ್ಲದ ನೆಟ್ವರ್ಕು
ಆಸಕ್ತರು 9876543210ಗೆ "ಬಲೆ" ಅಂತ ಟೆಕ್ಸ್ಟ್ ಕಳಿಸಿ
ನಾಗೇಶರು ಆ ಅಂಕಿಗೆ ಟೆಕ್ಸ್ಟ್ ಕಳಿಸುತ್ತಾರೆ...



...ಕೆಲವು ವರ್ಷಗಳ ನಂತರ, ನಾಗೇಶ್ ಮತ್ತು ರಾಣಿ (ಅವರ ಹೆಂಡತಿ) ಹಳ್ಳಿಯಲ್ಲಿರುವ ಬಲೆ ನೆಟ್ವರ್ಕಿನ ಗುಂಪಿನ ಸದಸ್ಯರಾಗಿದ್ದಾರೆ.
ಕೇಂದ್ರೀಕೃತ
ವಿಕೇಂದ್ರೀಕೃತ
ನಮ್ಮ ಹಳ್ಳಿಯಲ್ಲಿರುವ ಸಾಂಪ್ರದಾಯಿಕ ಕೇಂದ್ರೀಕೃತ ನೆಟ್ವರ್ಕಿನ ಮೇಲೆ ಒಬ್ಬರದ್ದೇ ನಿಗಾ ಇರುತ್ತದೆ. ಇಡೀ ನೆಟ್ವರ್ಕಿನ ಮೇಲೆ ಅವರಿಗೇ ಮಾತ್ರ ಅಧಿಕಾರ.
ಆದರೆ, ವಿಕೇಂದ್ರೀಕೃತ ನೆಟ್ವರ್ಕೆಂದರೆ, ನಮ್ಮೆಲ್ಲರ ಸೊತ್ತು! ನಾವೆಲ್ಲರೂ ಅದರ ಮಾಲೀಕರು
ಜಯಲಕ್ಷ್ಮೀ ಬಲೆ ನೆಟ್ವರ್ಕು ಮತ್ತು ವಿಕೇಂದ್ರೀಕರಣದ ಬಗ್ಗೆ ಮಾತಾಡುತ್ತಿದ್ದಾರೆ.
ಇದರಿಂದ, ಯಾರೊಬ್ಬರೂ ಈ ನೆಟ್ವರ್ಕಿನಿಂದ ನಿಮ್ಮನ್ನು ಹೊರಗೆ ಹಾಕಲಾರರು. ಇಂಥ ನೆಟ್ವರ್ಕಿಗೆ ಬಲೆ ನೆಟ್ವರ್ಕು ಎನ್ನುತ್ತಾರೆ. ಈ ಕ್ರಾಂತಿಕಾರಿ ಕೆಲಸ ನಮ್ಮ ಕರ್ನಾಟಕದ್ದೇ ಒಂದು ಹಳ್ಳಿಯಲ್ಲಿ ಶುರುವಾಯಿತೆಂದು ಹೇಳಲು ನನಗೆ ತುಂಬ ಹೆಮ್ಮೆ!


೨೦೨೫ರಲ್ಲಿ ಅವರ ಹಳ್ಳಿಯಲ್ಲಿ ದಿನೇಶ್ ಮತ್ತು ಅವರ ಗುಂಪಿನ ಸದಸ್ಯರು
ವೈಫೈ ಹಾಟ್-ಸ್ಪಾಟುಗಳು ಮತ್ತು ಸ್ಥಳೀಯ ನೆಟ್ವರ್ಕಿನ ವ್ಯವಸ್ಥೆಗೆ ಕೆಲಸ ನಡೆಯುತ್ತಿದೆ
ಸರ್ವರ್ ಕೋಣೆ
ಹಾಟ್-ಸ್ಪಾಟ್
ಸರ್ವರ್ ಕೋಣೆ ಮತ್ತು ಸ್ಥಳೀಯ ಬಾನುಲಿ ಕೇಂದ್ರದಲ್ಲಿ ಎಲ್ಲ ಸಿದ್ಧ. ಆದ್ರೆ ಈ ನೆಟ್ವರ್ಕನ್ನು ಹಬ್ಬಿಸ್ಬೇಕೊ ಏನೊ...ಪಕ್ಕದ್ಹಳ್ಳಿಯೋರು ಕೇಳ್ತದಾರೆ...
Dinesh
ಖರೆ! ಹಾಗೇ ಮಾಡ್ಬಹುದು...ಆದರೆ ಪ್ರತಿಯೊಂದು ಹಳ್ಳಿಯೂ ಅದರ್ದೇ ನಿಯಮ ಮಾಡಿ ತಮ್ಮ ಡೇಟಾದ ಮಾಲೀಕರಾಗಲಿ. ಇದ್ನ ಅವ್ರೆಲ್ಲರಿಗೂ ಅರ್ಥೈಸಿ ಬಲೆ ಮಾಡಲು ಕಲಿಸ್ಬಹುದು...
ನೀವೇ ಬಲೆಗಾರಾರು!


ಸೂರ್ಯಪಟ್ಟಿ (ಸೋಲಾರ್ ಪ್ಯಾನಲ್), ಸೂಕ್ಷನಿಯಂತ್ರಕ ಹಲಗೆ, ತೇಪೆ ಮತ್ತು ನೀರ ಬಾಟಲಿ ಜೊತೆ ಜುಗಾಡ್ ಬಳಸಿ ಮಾಡಿದ ವೈಫೈ ಹಾಟ್-ಸ್ಪಾಟ್. ಈ ಸಣ್ಣ ಆವಿಷ್ಕಾರ ಎಲ್ಲಾ ಹಳ್ಳಿಗಾಡಿಗೂ ಅಂತರ್ಜಾಲದ ವ್ಯವಸ್ಥೆ/ಕನೆಕ್ಟಿವಿಟಿ ಇತ್ತಿದೆ.
HOTSPOT


ನೆಟ್ವರ್ಕಿನ ಸ್ವಾವಲಂಬಿ ಗುಣ ಮತ್ತು ವಿಕೇಂದ್ರೀಕೃತ ಕನೆಕ್ಟಿವಿಟಿ ಅದನ್ನು ಬೇಗ ದೊಡ್ಡದಾಗಿಸಿ...
...ಅಕ್ಕಪಕ್ಕದ ಹಳ್ಳಿಗಳಿಗೆ ತಲುಪಿದೆ!


ಬಲೆ ನೆಟ್ವರ್ಕ್ ಸಭೆ
2037ನೆ ಇಸವಿಯ ಬಲೆ ಸಭೆ
ಈ ಗುಂಪು ಮಂಜುನಾಥರನ್ನು ತಾಂತ್ರಿಕ ಬೆಂಬಲಿಗರಾಗಿ ಆಯ್ಕೆ ಮಾಡಿದೆ. ಅವರು ಇಲ್ಲಿನ ಯುವ ಜನರ ಸಹಾಯದೊಂದಿಗೆ ಒಂದು ತಂಡ ಕಟ್ಟುತ್ತಾರೆ. ಮತ್ತು ಆಶಾ ಅವರು ಇಲ್ಲಿಯ ಡೇಟಾ ನಿರ್ವಾಹಕರಾಗಿರುತ್ತಾರೆ.
ಆಶಾ ಅವರು ನಿಮ್ಮೆಲ್ಲರ ಜೊತೆ ಮಾತಾಡಿ ಡೇಟಾ ಸಂಗ್ರಹಣೆ ಮತ್ತು ಹಂಚುವಿಕೆ ಬಗ್ಗೆ ತೀರ್ಮಾನಿಸುತ್ತಾರೆ. ಹೊರಗಿನ ಗುಂಪುಗಳೊಡನೆಯೂ ಆಶಾ ನಿಮ್ಮ ಪರವಾಗಿ ಮಾತಾಡುತ್ತಾರೆ.
ಈಚೆಗೆ, ಹಳ್ಳಿಗಳಲ್ಲಿ ಮತ್ತು ಕಲವು ಊರುಗಳಲ್ಲೂ ಬಲೆ ನೆಟ್ವರ್ಕುಗಳು ಅಂತರ್ಜಾಲದ ಸ್ಥಾನವನ್ನು ತುಂಬುತ್ತಿವೆ. ಜನರಿಗೆ ಅವರ ಡೇಟಾ ಅವರ ಕೈಯಲ್ಲಿರಬೇಕೆಂಬುವ ಆಸೆಯಿದೆ. ನಮ್ಮ "ಹಳ್ಳಿಗ"ರಿಂದ ಊರಿನವರೂ ಕಲಿತದ್ದು ನಮಗೆ ಹೆಮ್ಮೆ ತರಬೇಕು!
ಈಗ, ನಮ್ಮದೇ ಬಲೆ ನೆಟ್ವರ್ಕ್ ಇರುವುದರಿಂದ, ಅಧಿಕಾರಸ್ಥರಿಗೆ ನಮ್ಮ ಸ್ಥಳೀಯ ನೆಟ್ವರ್ಕನ್ನು ಸುಮ್ಮಸುಮ್ಮನೆ ತೆಗೆಯಲು ಕಷ್ಟ. ಈ ನಮ್ಮ ಚಳುವಳಿಗೆ ನಾವಿಟ್ಟ ಹೆಸರು: [ಡಿಸ್ಕೈನಿನ] ದಿಟ್ಟತನ.
ಬಲೆ ನೆಟ್ವರ್ಕ್ ಡೇಟಾ ನಿಯಂತ್ರಕದಿಂದ ವಿಕೇಂದ್ರೀಕೃತ ನೆಟ್ವರ್ಕು ನಿರ್ಮಿಸಲಾಗುವುದು. ಖಾಸಗಿಕೃತ ಡೇಟಾ ನಾಣ್ಯಗಳು ಆಧಾರ್, ಟೆಕ್ಸ್ಟ್, ಕ್ಯಾಮರಾ, ಸ್ಥಳ ಇತ್ಯಾದಿ ಬೇರೆಬೇರೆ ಡೇಟಾ ಬಗೆಯನ್ನು ಪ್ರತಿನಿಧಿಸುತ್ತವೆ. ನಾಣ್ಯಗಳನ್ನು 'ಬಲೆ ಬಟ್ಟಲಿ'ಗೆ ಹಾಕಿದ ಕೂಡಲೇ ಆ ಬಗೆಯ ಡೇಟಾವನ್ನು ಗೌಪ್ಯವಾಗಿಸುತ್ತದೆ.





**ಬಲೆ ಮಾಡುವ ಬಗೆ**

quicksand.co.in
dundee.ac.uk

**ಲೇಖಕರು**
ಲೊರೇನ್ ಕ್ಲಾರ್ಕ್, ಬಬಿತಾ ಜಾರ್ಜ್, ರೋಮಿತ್ ರಾಜ್, ಜಾನ್ ರಾಜರ್ಸ್, ಮಾರ್ಟಿನ್ ಸ್ಕೆಲಿ ಮತ್ತು ಪೀಟ್ ಥಾಮಸ್

**ಚಿತ್ರಗಳು**
ಗೌರವ್ ಶರ್ಮ

**ಅನುವಾದ**
ಮಾಧವ್ ಅಜ್ಜಂಪುರ್

**ವಿನ್ಯಾಸ ಮತ್ತು ಕಲಾ ನಿರ್ದೇಶನ**
ನೇಹಾ ಸಿಂಗ್

**ಮುದ್ರಣ**
ಬ್ರ್ಯಾಂಡ್ ಮ್ಯಾವರಿಕ್ಸ್ , ಇಂಡಿಯಾ
ಪ್ರೆಸಿಶನ್, ಯು.ಕೆ.

**ಕೃತಜ್ಞತೆಗಳು**
ಭಾರತ, ಯುನೈಟೆಡ್ ಕಿಂಗ್ಡಮ್ ಮತ್ತಿತರ ಪ್ರದೇಶಗಳಲ್ಲಿರುವ ಹಲವಾರು ಜನ ಮತ್ತು ಸಂಸ್ಥೆಗಳ ನೆರವಿನಿಂದಲೇ ಈ ಯೋಜನೆ ಸಾಧ್ಯವಾಯಿತು. ಅವರು ತೋರಿಸಿದ ಶ್ರದ್ಧೆ, ಕೇಳಿದ ಪ್ರಶ್ನೆ ಮತ್ತು ನೀಡಿದ ಸಹಯೋಗ ನಮಗೆ ಪ್ರೇರಣೆ ಒದಗಿಸಿ ಹೊಸ ಆಲೋಚನೆಗಳಿಗೂ ಎಡೆಮಾಡಿಕೊಟ್ಟಿತು. ಈ ಒಡನಾಟದ ಮುಂದುವರಿಕೆಯನ್ನು ನಾವು ನಿರೀಕ್ಷಿಸುತ್ತೇವೆ.

ಜನಸ್ತು ಮತ್ತು ಇರುವೆ ಸಂಸ್ಥೆಗಳಿಗೆ ವಿಶೇಷ ಕೃತಜ್ಞತೆ ಸಲ್ಲುತ್ತದೆ. ಕ್ರಾಫ್ಟರ್ ಸ್ಪೇಸ್ ಸದಸ್ಯರಾದ ಟಿ. ಬಿ. ದಿನೇಶ್, ಗೋಪಿ ಕೃಷ್ಣ, ಸಂಕೇತ್, ಶಾಲಿನಿ, ನೀಲಕಂಠ ಮಾಮಾ, ಗಿರೀಶ್ ಎನ್. ಪಿ, ರಾಜೇಶ್ವರಿ, ಸಿದ್ಧವ್ವ ಮತ್ತಿತರ ಕುಶಲಕಲಾಗಾರರಿಗೆ ನಮ್ಮ ವಿಶೇಷ ವಂದನೆಗಳು.

janastu.org
iruway.janastu.org

**ಅನುದಾನ ಕೊಟ್ಟವರು**
ಗ್ಲೋಬಲ್ ಚ್ಯಾಲೆಂಜಸ್ ರಿಸರ್ಚ್ ಫಂಡ್ (ಜಾಗತಿಕ ಸವಾಲುಗಳ ಸಂಶೋಧನ ನಿಧಿ)
ದಿ ಸ್ಕಾಟಿಶ್ ಫಂಡಿಂಗ್ ಕೌನ್ಸಿಲ್ (ಸ್ಕಾಟಿಶ್ ಧನಸಹಾಯ ಸಮಿತಿ)



ಬೇರೆ ಹೇಳದಿದ್ದಲ್ಲಿ, ಈ ಕೃತಿ ಕ್ರಿಯೇಟಿವ್ ಕಾಮನ್ಸ್ ಆಟ್ರಿಬ್ಯೂಶನ್ ಅಂತರ್ರಾಷ್ಟ್ರೀಯ ಪರವಾನಗಿ ಅಡಿಯಲ್ಲಿ ಲೈಸನ್ಸ್ ಆಗಿರುತ್ತದೆ.


**ಹೆಚ್ಚು ಮಾಹಿತಿಗಾಗಿ ಇಲ್ಲಿ ಹೋಗಿ**
decentralisingdigital.com


HELLO!